

ಚಿತ್ರಗಳು: ಎಸ್.ವಿ. ಹೂಗಾರ

ಅವಳೊಂದಿಗೆ ಸಮುದ್ರತೀರದಲ್ಲಿ ಕುಳಿತಿದ್ದೆ. ಅಲೆಗಳು ಬಂದು ಬಂದು ಮುಗಿ ಬೀಳುತ್ತಿದ್ದವು. ಕತ್ತಲಾಗುತ್ತಲಿತ್ತು. ತೀರದಲ್ಲಿ ಜನರ ಸಂಖ್ಯೆ ಕಡಿಮೆಯಾಗತೊಡಗಿತ್ತು. ದೂರದಲ್ಲಿ ಒಂದು ನಾವೆ. ಅದು ಬರುತ್ತಲಿದೆಯೋ, ಹೋಗುತ್ತಲಿದೆಯೋ ಅಥವಾ ನಿಂತಿದೆಯೋ ತಿಳಿಯುತ್ತಿಲ್ಲ. ಅಥವಾ ಅಲೆಗಳ ಉಬ್ಬರಗಳಿಗೆ ಪ್ರತಿಕ್ರಿಯಿಸದಿರಲು ತನ್ನನ್ನು ತಾನು ನಿಯಂತ್ರಿಸುತ್ತಿರಬಹುದು. ಅವಳ ಕಡೆಗೆ ನೋಡಿದೆ. ಅವಳ ಮುಖದಲ್ಲಿ ಮುಗ್ಧತೆ ಎದ್ದು ಕಾಣುತ್ತಿತ್ತು. ಆ ಮುಗ್ಧತೆಯನ್ನು ನಾನು ಯಾವಾಗಲೂ ಪ್ರೀತಿಸುತ್ತಿದ್ದೆ. ಅವಳ ಬಟ್ಟಲುಗಣ್ಣುಗಳು ಮುಳುಗಿದ ಸೂರ್ಯನ ದಿಕ್ಕನ್ನೇ ನೋಡುತ್ತಿದ್ದವು. ಸೆರಗು ಕಟ್ಟಿ, ಬೆನ್ನಿನವರೆಗೆ ಜಡೆ ಇಳಿ ಬಿಟ್ಟು, ಮೊಣಕಾಲು ಮಡಿಚಿ ಕುಳಿತವಳಲ್ಲಿ ಕಂಡದ್ದು ಪೆದ್ದುತನವೇ, ಮುಗ್ಧತೆಯೇ... ತಿಳಿಯದು.

'ಪ್ರಶ್ನಾ...' ಕರೆದೆ. ಏನು ಎಂಬಂತೆ ನೋಡಿದಳು.

'ನೀನು ಹೀಗೆ ಯಾಕಾದೆ?' 'ಹೇಗೆ?' ಎಂಬಂತೆ ನೋಡಿದಳು. 'ನೀನು ಹೀಗಿರಬಾರದಿತ್ತು' ಅಪ್ರಯತ್ನವಾಗಿ ನನ್ನ ನಿರೀಕ್ಷೆ ಹೊರಚೆಲ್ಲಿದ್ದೆ. ಅವಳು ಜೋರಾಗಿ ನಗತೊಡಗಿದಳು. ನಂತರ 'ಯಾಕೆ... ನಾನು ಚೆನ್ನಾಗಿಲ್ವ' ಎಂದು ಕೇಳುತ್ತ ತನ್ನ ಕೈಬಳೆ, ಉಂಗುರ, ಕಿವಿ ಓಲೆ, ವಾಚು, ಸೀರೆ ನೆರಿಗೆ ಎಲ್ಲವನ್ನೂ ಒಮ್ಮೆ ನನಗೆ ತೋರಿಸುವಂತೆ ನೋಡಿಕೊಂಡಳು.

'ಅದಲ್ಲ ನಾನು ಹೇಳಿದ್ದು. ನಿನ್ನ ಮನಸ್ಸು ವರ್ತನೆ ಕುರಿತು ಹೇಳ್ತಿದ್ದೀನಿ' ಸ್ವಲ್ಪ ಅಸಹನೆಯಿಂದ ನುಡಿದೆ.